ಅಲ್ಲಾಡುತ್ತಿತ್ತು. ಅಲ್ಲ, ಅಲ್ಲಾಡುತ್ತಿದ್ದವು. ಏಕೆಂದರೆ ನೋವು ಇದ್ದದ್ದು ಎರಡು ಹಲ್ಲುಗಳಲ್ಲಿ. ಹಾಗೋ ಹೀಗೋ ಎರಡು ತಿಂಗಳು ನೋವಿನಲ್ಲೇ ಕಳೆದೆ. ಇನ್ನು ನೋವು ತಡೆಯಲಾಗುವುದಿಲ್ಲ ಎನಿಸಿದಾಗ ಅನಿವಾರ್ಯವಾಗಿ ಡಾಕ್ಟರ್ ಹತ್ತಿರ ಹೋಗಲೇಬೇಕೆನಿಸಿತು. ಆದರೆ ಸರ್ಕಾರಿ ಆಸ್ಪತ್ರೆಗೆ ಹೋಗೋದೋ, ಅಥವಾ ಕ್ಲಿನಿಕ್‌ಗೆ ಹೋಗೋದೋ ಎಂಬ ಸಂದಿಗ್ಧದಲ್ಲಿದ್ದಾಗ ಸ್ನೇಹಿತರಿಂದ, 'ಫೀ ಜಾಸ್ತಿ ಆದರೂ ಸರ್ಕಾರಿ ಆಸ್ಪತ್ರೆಗಿಂತ ಖಾಸಗಿ ಕ್ಲಿನಿಕ್‌ಗೆ ಹೋಗಿ' ಎಂಬ ಸಲಹೆ ಬಂತು. ಆಗಲಿ ಎಂದು ಇರೋದ್ರಲ್ಲಿ ಸ್ವಲ್ಪ ಒಳ್ಳೆಯ ಕ್ಲಿನಿಕ್ ಎಂದು ತಿಳಿದ ಕ್ಲಿನಿಕ್‌ಗೆ ಹೋದೆ. 'ರೋಗಿಸಂದಣಿ' ಸಾಕಷ್ಟಿತ್ತು. ಕುಳ್ಳಿರಿಸಿದರು. 'ಕಾರ್ಡ್ ಇದೆಯಾ' ಎಂದರು. ನಾನು 'ಯಾವ ಕಾರ್ಡ್' ಎಂದೆ. 'ಓ! ಹೊಸಬರ..' ಎಂದು ಹೊಸದಾಗಿ ನನ್ನ ಹೆಸರು ಮುಂತಾದ ವಿವರಗಳನ್ನು ಭರ್ತಿ ಮಾಡಿದ ಒಂದು ಕಾರ್ಡ್ ಕೊಟ್ಟರು. ಸರದಿ ಬಂದಾಗ ಡಾಕ್ಟರ್ ಬಳಿ ಕಳಿಸಿದರು.

ಹಾಸಿಗೆಯಂತಹ  ಕುರ್ಚಿಯ ಮೇಲೆ ಹಲ್ಲಿನ ಡಾಕ್ಟರ್ ನನ್ನನ್ನು ಕೂರಿಸಿದರು, ಅಲ್ಲಲ್ಲ ಮಲಗಿಸಿದರು. ಅದು ಮಂಚವೂ ಅಲ್ಲ, ಕುರ್ಚಿಯೂ ಅಲ್ಲ. ಮಂಕುರ್ಚಿ ಅಥವ ಕೂಮಂಚ ಅಂತ ಕರೆಯಬಹುದೇನೋ! ಸ್ವಲ್ಪ ಮಡಿವಂತನಾದ ನಾನು ಅದರ ಮೇಲೆ ಮಲಗಲು ಹಿಂದೇಟು ಹಾಕುತ್ತಲೇ ಅನಿವಾರ್ಯವಾಗಿ ಮಲಗಿದೆ. ಸಹಾಯಕಿಯೊಬ್ಬರು ಟಿಶ್ಯು ಪೇಪರ್ ಒಂದನ್ನು ಕೊಟ್ಟರು. ನಾನು ಅದನ್ನು ಅಗಲ ಮಾಡಿ ತಲೆಯ ಕೆಳಗಡೆ ಇಟ್ಟುಕೊಂಡೆ. ತಲೆ ಕೊಳೆಯಾಗದಿರಲೆಂದು. ಅವರು ವಿಚಿತ್ರವೆಂಬಂತೆ ನೋಡಿದರು. ಅದು ಬಾಯಿ ಒರೆಸಲು ಕೊಟ್ಟಿದ್ದು ಅಂತ ನನಗೆ ನಂತರ ತಿಳಿಯಿತು.

ಮೊದಲಿಗೆ ಡಾಕ್ಟರ್ ಗ್ಲೌಸ್ ಮತ್ತು ಬಾಯಿ ಮುಸುಕು ಹಾಕಿಕೊಂಡರು. ಮತ್ತೆ ನಮ್ಮ ಬಾಯಿ ದುರ್ನಾತ ಅವರಿಗೆ ಯಾಕೆ ಬೇಕು ಹೇಳಿ? ಸಹಾಯಕಿ ನನ್ನ ಮುಖಕ್ಕೆ ಮತ್ತು ಬಾಯಿಗೆ ಟಾರ್ಚ್ ಹಿಡಿದರು. ಡಾಕ್ಟರ್ 'ಆ' ಎಂದು ನನ್ನ ಬಾಯಿ ತೆಗೆಸಿ 'ನೋಡಿ, ರೂಟ್ ಕೆನಲ್ ಟ್ರೀಟ್‌ಮೆಂಟ್ ಮಾಡಬೇಕು' ಅಂದರು. ಹಾಗೆಂದರೆ ಏನು ಡಾಕ್ಟರ್ ಅಂದೆ? ವಿವರಿಸಿದರು ಹಾಗೂ ಎಷ್ಟಾಗುತ್ತೆ ಅಂತ ಸಹ ಹೇಳಿದರು. ಸಾವಿರಾರು ರುಪಾಯಿಗಳಾಗುತ್ತೆ ಎಂದು ಕೇಳಿದ ಮೇಲೆ ಹಲ್ಲು ಕಿತ್ತಾಕಿಬಿಡಿ ಅಂದೆ. ಯಾಕೆಂದರೆ ಹಲ್ಲು ಕೀಳಲು ಕಡಿಮೆ ದುಡ್ಡು ಎಂದು ಗೊತ್ತಿತ್ತು. ಡಾಕ್ಟರ್ ನಕ್ಕು 'ನೋಡಿ,  ಹಲ್ಲು ಪೂರ್ತಿ ಹಾಳಾಗಿದ್ದರೆ ಮಾತ್ರ ಕೀಳಬೇಕು. ಚೆನ್ನಾಗಿದ್ದರೆ ಕೀಳಲ್ಲ' ಎಂದರು. ನಾನು ಮರು ಮಾತನಾಡದೆ ರೂಟ್‌ಕೆನಲ್ ಟ್ರೀಟ್ಮೆಂಟಿಗೆ ಒಪ್ಪಿದೆ. 'ಅದಕ್ಕೆ ಸ್ಪೆಷಲಿಸ್ಟ್ ಇದ್ದಾರೆ. ಅವರು ಇಂತಹ ದಿನ ಬರ್ತಾರೆ, ಅವತ್ತು ಬನ್ನಿ' ಅಂದರು.

ಹಣ, ಸಮಯ ಹೇಗೋ ಹೊಂದಿಸಬಹುದು. ಇನ್ನೇನು ಈ ಹಲ್ಲಿನ ನೋವು ತಡೆಯಕ್ಕಾಗುತ್ಯೆ? ಆ ದಿನವೂ ಬಂತು. ಹೇಳಿದ್ದ ಸಮಯಕ್ಕೆ ಹೋದೆ. ಎಂದಿನಂತೆ ಮಲಗಿಸಿದರು. ಲೇಡಿ ಡಾಕ್ಟರೊಬ್ಬರು ಇಂಜೆಕ್ಷನ್ ಸಿರಿಂಜು ಹಿಡಿದು ಬಂದರು. ಮೊದಲೇ ನನಗೆ ಇಂಜೆಕ್ಷನ್ ಅಂದರೆ ಭಯ. ಆದೂ ಬಾಯಿಗೆ ಅಂದರೆ ಹಲ್ಲುಗಳನ್ನು ಭದ್ರವಾಗಿ ಹಿಡಿದಿರುವ ಭಾಗಕ್ಕೆ (ಒಸಡು?) ಇಂಜೆಕ್ಷನ್ ಕೊಡುವುದೆಂದಾಗ ನನಗೆ ನರಕದ ಮೊದಲ ಶಿಕ್ಷೆ ಶುರುವಾಯಿತು ಅಂದುಕೊಂಡೆ. ಇದು ಮುಂದೆ ಸಿಗುವ ಶಿಕ್ಷೆಗೆ ಪೂರ್ವ ತಯಾರಿ. ಆದರೆ ಇಂಜೆಕ್ಷನ್ ಕೊಡೊ ಡಾಕ್ಟರ್ ಯಮದೂತನಂತೆ ಇರಲಿಲ್ಲ.  ಆದ್ದರಿಂದ ಇಂಜೆಕ್ಷನ್ ಕೊಡುವಾಗ ಅಷ್ಟೊಂದು ನೋವು ಅನಿಸಲಿಲ್ಲ. ಇಂಜೆಕ್ಷನ್ ಕೊಟ್ಟ ಆ ಭಾಗ ಸಂವೇದನೆ ಕಳೆದುಕೊಂಡಿತು. ಇಪ್ಪತ್ತು ನಿಮಿಷ ಹೊರಗೆ ಕುಳಿತುಕೊಳ್ಳಲು ಹೇಳಿದರು.

ನನಗೆ ಮಿಸ್ಟರ್ ಬೀನ್ ಡೆಂಟಲ್ ಕ್ಲಿನಿಕ್‌ನಲ್ಲಿ ಇದ್ದ ದೃಶ್ಯ ಜ್ಞಾಪಕಕ್ಕೆ ಬಂತು. ರೂಟ್ ಕೆನಲ್ ಸ್ಪೆಷಲಿಸ್ಟ್ ಆಗಲೇ ಬಂದಿದ್ದರು. ನನಗಿಂತ ಮೊದಲು ಇನ್ನೊಬ್ಬರಿಗೆ ಟ್ರೀಟ್ ಮೆಂಟ್ ಪ್ರಾರಂಭಿಸಿದ್ಧರು. ನನ್ನ ಸರದಿ ಬಂತು. ಮೊದಲಿನ ಹಾಗೇ ಮಲಗಿಸಿದರು. ಡಾಕ್ಟರ್ ಆಯುಧ ಸಮೇತ ತಯಾರಾಗಿದ್ದರು. ಕ್ಯಾಲೆಂಡರ್ ಜ್ಞಾಪಕಕ್ಕೆ ಬಂತು. ಆ ಆಯುಧ ದೊಡ್ಡದಲ್ಲದಿದ್ದರೂ ಕಲ್ಲು ಕೊರೆಯುವ ಸಾಧನದಂತೆ ಭಯ ಹುಟ್ಟಿಸುತಿತ್ತು. ಡಾಕ್ಟರ್ ಬಾಯಿ 'ಆ' ಮಾಡಲು ಹೇಳಿ, 'ನೀವು ಹಲ್ಲು ಉಜ್ಜುವ ವಿಧಾನ ಸರಿಯಿಲ್ಲದೆ ಹೀಗಾಗಿದೆ. ಹಲ್ಲು ಹಾಗೂ ಒಸಡು ಸೂಕ್ಷ್ಮ ಅದನ್ನು ಬಟ್ಟೆ ತೊಳೆಯುವ ಬ್ರಷ್‌ನಂತೆ ತಿಕ್ಕಿದರೆ ಇನ್ನೇನಾಗುತ್ತೆ?' ಎಂದು ಟೀಕಿಸಿ, ತಮ್ಮ ಹಲ್ಲು ಕೊರೆಯುವ ಕೆಲಸ ಶುರು ಮಾಡಿದರು.

ಅಷ್ಟು ನೋವಾಗದೆ ಇದ್ದರೂ, ಈ ಬಾಯಿ ತೆರೆದುಕೊಂಡೇ ಇರುವುದು ಯಾವ ನನ್ನ ವಿರೋಧಿಗೂ ಬೇಡ. ಅವರು ಕೊರೆಯುವ ಅಷ್ಟೊತ್ತೂ 'ಆ' ಎಂದು ಬಾಯಿ ತೆರೆದುಕೊಂಡಿರುವುದು ನಿಜವಾಗಲೂ ನರಕ ಯಾತನೆ. ನಾನು ಅದ್ಯಾವ ಪಾಪ ಮಾಡಿದ್ದೆ? ನನಗ್ಯಾಕೆ ಈ ಶಿಕ್ಷೆ? ಎಂದನ್ನಿಸಿತು. ಅದೆಲ್ಲಿತ್ತೋ ನಿದ್ದೆ, ಡಾಕ್ಟರ್ ಕೊರೆಯುವಾಗಲೆ ನನಗೆ ಅರಿವಿಲ್ಲದಂತೆ ಕಣ್ಣು ಬಾಯಿ ಎರಡೂ ಮುಚ್ಚಿಕೊಳ್ಳುತ್ತಿದ್ದವು. ಡಾಕ್ಟರ್ ತಾಳ್ಮೆಯಿಂದಲೇ 'ಆ' ಮಾಡಿ ಎನ್ನುತ್ತಿದ್ದರು.  ಅರಿವಾದೊಡನೆ ಮತ್ತೆ ಕಣ್ಣು ಬಾಯಿಯನ್ನು ಮೊದಲಿನ ಸ್ಥಿತಿಗೆ ತರುವುದು ಸಾಮಾನ್ಯದ ಕೆಲಸವಲ್ಲ. ಎಂಜಲು, ಹಲ್ಲಿನ ಪುಡಿ (ಹಲ್ಲುಜ್ಜುವ ಪುಡಿಯಲ್ಲ, ಪುಡಿಯಾದ ಹಲ್ಲು) ರಾಸಾಯನಿಕ ಮಿಶ್ರಣ ಬಾಯಲ್ಲಿ ಜಾಸ್ತಿಯಾಗುತಿತ್ತು. ಬಾಯಿಗೆ ಕೊಳವೆ ಇಟ್ಟು ಎಳೆಯುತ್ತಿದ್ದರೂ ಅದನ್ನು ಬಾಯಿಯಲ್ಲಿ ಇಟ್ಟುಕೊಂಡಿರುವುದೊಂದು ಸಂಕಟ. ಕೆಲವೊಮ್ಮೆ ನಾನೇ ಪಕ್ಕದಲ್ಲಿದ್ದ ಸಿಂಕ್‌ಗೆ ಉಗುಳುತ್ತಿದ್ದೆ. ಮೂರ್ನಾಲ್ಕು ಸಾರಿ ಬಾಯಿ ಮುಕ್ಕಳಿಸುತ್ತಿದ್ದೆ. ಅವರು ಒಂದು ಸಾರಿ ಸಾಕು ಎನ್ನುತ್ತಿದ್ದರು. ಹೇಗೋ ದೇವರನ್ನು ನೆನಸಿಕೊಂಡು ಆ ಯಾತನೆ ಸಹಿಸಿಕೊಂಡೆ. ಡಾಕ್ಟರ್ ಯಾವಾಗ ಮೇಲಕ್ಕೇಳಿ ಎಂದು ಎಬ್ಬಿಸುತ್ತಾರೋ ಎಂದು ಕಾಯುತ್ತಿದ್ದೆ. ಕೊನೆಗೂ ಏಳಿ ಬಾಯಿ ತೊಳೆದುಕೊಳ್ಳಿ ಅಂದಾಗ ಅಬ್ಬಾ ನರಕದಿಂದ ಬಿಡುಗಡೆ ಸಿಕ್ಕಿತಲ್ಲ ಎಂದು ಖುಷಿಯಾಯಿತು.

ಆದರೆ ಆ ಸಂತೋಷ ಹೆಚ್ಚಿನ ಹೊತ್ತು ಇರಲಿಲ್ಲ. 'ನಿಮಗೆ ಎರಡು ಹಲ್ಲುಗಳಿಗೆ ರೂಟ್ ಕೆನಲ್ ಮಾಡಬೇಕು. ಈಗ ಒಂದು ಹಲ್ಲಿನ ಅರ್ಧ ಕೆಲಸ ಮಾತ್ರವೆ ಆಗಿದೆ' ಅಂದಾಗ ಅಯ್ಯೋ ನನ್ನ ಕರ್ಮವೇ! ಅದಿನ್ನೂ ಸವೆದಿಲ್ಲ ಅಂದುಕೊಂಡೆ. ಮಾಡಿದ ಕರ್ಮ ಅನುಭವಿಸಲೇಬೇಕು ಎಂಬ ದೊಡ್ಡವರ ನುಡಿಯನ್ನು ನೆನಪಿಸಿಕೊಂಡು ಮುಂದೆ ಹೇಳಿದ ದಿನಾಂಕದಂದು ಬರಲು ಮನಸ್ಸನ್ನು ಗಟ್ಟಿ ಮಾಡಿಕೊಂಡೆ. ಕೊನೆಯ ದಿನ ಹಲ್ಲು ಮುಚ್ಚಳ ಹಾಕುತ್ತೇವೆ ಅಂದರು. ಅದನ್ನು ಹಾಕಲೇಬೇಕಾ ಎಂದು ಕೇಳಿದೆ. 'ಹೊಸದಾಗಿ ಕಟ್ಟಿದ ಮನೆಯ ರಕ್ಷಣೆಗೆ ಬಾಗಿಲು ಬೇಡವೆ?' ಎಂಬ ಉಪಮೇಯ ಕೊಟ್ಟರು ಅವರು.

ಹೇಳಿದ್ದ ದಿನ ಹೋದೆ. ಸದ್ಯ ಇವತ್ತು ಹಲ್ಲು ಮುಚ್ಚಳ ಹಾಕಿ ಕಳುಹಿಸುತ್ತಾರೆ, ಇನ್ನು ಮೇಲೆ ನರಕದ ಅನುಭವ ಇರುವುದಿಲ್ಲ ಎಂಬ ಖುಷಿಯಲ್ಲಿ ಹೋದೆ. ಇಲ್ಲ ಸಾರ್ ಇವತ್ತು ಹಲ್ಲಿನ ಅಳತೆ ತೆಗೆದುಕೊಳ್ಳುತ್ತೇವೆ. ನಂತರ ಆರ್ಡರ್ ಕೊಟ್ಟು ಇನ್ನೊಂದು ದಿನ ಹಲ್ಲು ಮುಚ್ಚಳ ಹಾಕುತ್ತೇವೆ ಅಂದರು. ಬರೀ ಅಳತೆ ತಾನೆ ತೆಗೆದುಕೊಳ್ಳುತ್ತಾರೆ ಎಂಬ ಖುಷಿ ಸ್ವಲ್ಪ ಹೊತ್ತಿಗೆ ಕರಗಿತು. ಯಾಕೆಂದರೆ ಮುಚ್ಚಳ ಸರಿಯಾಗಿ ಕೂರಲು ಹಲ್ಲುಗಳನ್ನು ಮತ್ತೆ ಕೊರೆಯಲು ಪ್ರಾರಂಭಿಸಿದರು. ಮತ್ತೆ ಮೊದಲ ದಿನದ ಪುನಾರವರ್ತನೆ. ಸಹಿಸಲೇಬೇಕು, ವಿಧಿಯಿಲ್ಲ. ನಂತರ ಕೃತಕ ದಂತ ಪಂಕ್ತಿಯ ರೀತಿಯ ಸಾಧನಕ್ಕೆ ಪೇಸ್ಟೊಂದನ್ನು ಮೆತ್ತಿ ಅದನ್ನು ನನ್ನ ದವಡೆಗೆ ಹೊಂದಿಕೆ ಮಾಡಿ ಅದು ಗಟ್ಟಿಯಾಗುವವರೆಗೂ ಬಾಯಿಯಲ್ಲೆ ಇಟ್ಟು ತೆಗೆದರು. ಅದು ಬಾಯಿಯಲ್ಲಿ ಇರುವಷ್ಟೂ ಹೊತ್ತು ಬಾಯಿ ತೆಗೆದುಕೊಂಡು ನಾಲಿಗೆಯನ್ನು ಹೊರಚಾಚಲು ಹೇಳಿದ್ದರು. ಆಗ ನನಗೆ ನನ್ನ ಅಂತಿಮ ದಿನದ ಚಿತ್ರಣ ಹೀಗೇ ಇರಬಹುದೇನೋ ಅನಿಸಿತು.

ಕೊನೆಗೂ ಮುಚ್ಚಳ ಹಾಕುವ ದಿನ ಬಂತು. ಆ ದಿನವೂ ಮುಚ್ಚಳದ ಅಳತೆಗೆ ತಕ್ಕಂತೆ ಹಲ್ಲುಗಳನ್ನು ಕೊರೆದು ಮುಚ್ಚಳವನ್ನು ಕೂರಿಸಿದರು. ನಂತರ ಚಮಚದ ಆಕಾರದ ವಸ್ತುವೊಂದನ್ನು ಬಾಯಿಯಲ್ಲಿ ಇಟ್ಟು ಕಚ್ಚಿ ಅಂದರು. ನಾನು ಆ ವಸ್ತುವನ್ನು ಕಚ್ಚಬೇಕೇನೋ ಎಂದು ಅದನ್ನು ಕಚ್ಚಲು ಹೋದೆ. ಡಾಕ್ಟರ್ ಅದನ್ನಲ್ಲ ಹಲ್ಲು ಕಚ್ಚಿ ಅಂದರು. ನಾನು ಮುಂದಿನ ಹಲ್ಲುಗಳನ್ನು ಕಚ್ಚಿದೆ. ಡಾಕ್ಟರ್ ದವಡೆ ಕಚ್ಚಿ ಅಂದರು. ದವಡೆ ಹಲ್ಲುಗಳಿಗೆ ತಾನೇ ಟ್ರೀಟ್ಮೆಂಟ್? ದವಡೆ ಹಲ್ಲುಗಳನ್ನು ಕಚ್ಚಿದೆ. ಆ ಮುಚ್ಚಳ ಇರುವ ಹಲ್ಲುಗಳನ್ನು ಕಚ್ಚಿದಾಗ ಅದೇನೋ ಒಂದು ರೀತಿಯ ಅನುಭವ. ನಂತರ ಹತ್ತಿಯ ರೀತಿಯ ವಸ್ತುವನ್ನು ಬಾಯಲ್ಲಿ ಇಟ್ಟು ಬಾಯಿ ಮುಚ್ಚಬೇಡಿ ಎಂದು ಆಜ್ಞೆ ಮಾಡಿ ಹೋದ ಡಾಕ್ಟರ್ ಬಹಳ ಹೊತ್ತು ಬರಲಿಲ್ಲ. ನೋಡಿದರೆ ನನ್ನನ್ನು ಮರೆತೇಬಿಟ್ಟು ಬೇರೆ ರೋಗಿಯ ಕಡೆಗೆ ಹೋಗಿದ್ದರು! 'ಹಸಿದ ಪಾಪಿ ದೇವಸ್ಥಾನಕ್ಕೆ ಹೋದ್ರೂ ಪ್ರಸಾದ ಸಿಗಲಿಲ್ಲ' ಅನ್ನೋ ಹಾಗೆ ನನ್ನ ಪಾಪ ಸುಲಭವಾಗಿ ಕಳೆಯುವುದಿಲ್ಲ ಎಂದುಕೊಂಡೆ.

'ಡಾಕ್ಟರು ಬೇಗ ಬರಲಿ ದೇವರೇ' ಎಂದುಕೊಂಡು ಹಾಗೆಯೇ ಒರಗಿದೆ. ಅಲ್ಲೇ ನಿದ್ದೆ ಬಂದುಬಿಡ್ತು.